**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ.</u>**

<u>ಸಿ.ಸಿ.ನಂ. **956/2016**</u>

ಪಿರ್ಯಾದುದಾರರು : ವಿಜಯಕುಮಾರ ಶಿವಲಿಂಗಪ್ಪ ಚನ್ನಣವರ

ವಿರುದ್ಧ

ಆರೋಪಿ ಹೆಸರುಃ  ಸಿದ್ರಾಮ  ಬಸವಪ್ರಭು  ಬೆಳಗಾವಿ, ವಯಾಃ 48 ವರ್ಷ,
ಸಾಃ  ಮರಡಿಬಸವೇಶ್ವರ  ದೇವಸ್ಥಾನದ ಹತ್ತಿರ, ಮರಡಿ ಗಲ್ಲಿ,
ಬೈಲಹೊಂಗಲ, ಜಿಃ ಬೆಳಗಾವಿ.

<u>ದಂಡ ಪ್ರಕ್ರೀಯಾ ಸಂಹಿತೆ ಕಲಂ.**313** ರಡಿಯಲ್ಲಿ ಆರೋಪಿ ಹೇಳಿಕೆ</u>

**ಪ್ರಶ್ನೆಃ** 1 : **ಅಭಿಯೋಜನೆಯ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿರುವಿರಾ**?

ಉತ್ತರ ಆಃ

ಪ್ರಶ್ನೆ **2.** ಃ ಫ್ರಾಸಾ-**1** ವಿಜಯಕುಮಾರ ಶಿವಲಿಂಗಪ್ಪ ಚನ್ನನ್ನವರ, ರವರು ತಮ್ಮ ಸಾಕ್ಷದಲ್ಲಿ " ಆರೋಪಿತನು ತನ್ನ ಮನೆತನಕ್ಕೆ ಮತ್ತು ವ್ಯಯಕ್ತಿಕ ಕೆಲಸಕ್ಕೆ ಹಣಕಾಸಿನ ಅವಶ್ಯಕತೆ ಬಂದಾಗ ಆಗಾಗ ಫ್ರಾಸಾ-1 ರವರ ಬಳಿ ಬಂದು ಕೈಗಡ ಸಾಲ ಪಡೆಯುತ್ತಿದ್ದನು ಮತ್ತು ಸದರಿ ಸಾಲವನ್ನು ವಾಯ್ದೆಯ ಪ್ರಕಾರ ಹಿಂತಿರುಗಿಸುತ್ತಾ ಬಂದಿದ್ದನು. ಸನ್ 2016 ರ ಫೆಬ್ರುವರಿ ತಿಂಗಳಲ್ಲಿ ತಮ್ಮ ಮನೆತನಕ್ಕೆ ಹಣದ ಅವಶ್ಯಕತೆ ಬಂದಾಗ ಆರೋಪಿತನು ರೂ. 6,00,000/- ಗಳನ್ನು ಕೈಗಡ ಸಾಲ ಕೊಡುವಂತೆ ವಿನಂತಿಸಿಕೊಂಡಿದ್ದನು.'' ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ ಆ

**ಪ್ರಃ3**: ಫ್ರಾಸಾ-**1** ವಿಜಯಕುಮಾರ ಶಿವಲಿಂಗಪ್ಪ ಚನ್ನನ್ನವರ**,** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರಿದು " ಆರೋಪಿತರಾದ ನೀವು ಸದರಿ ಹಣವನ್ನು ಒಂದು ತಿಂಗಳಲ್ಲಿ ಮರಳಿ ಕೊಡುತ್ತೇನೆ ಅಂತಾ ಹೇಳಿ ಅವರ ಕಡೆಯಿಂದ ತೆಗೆದುಕೊಂಡು ಹೋಗಿರುತ್ತಿರಿ. ನಂತರ ಒಂದು ತಿಂಗಳ ನಂತರ ಆರೋಪಿತನಾದ ನಿಮ್ಮ ಹತ್ತಿರ ಹಣ ಕೊಡಿರಿ ಅಂತಾ ಅನೇಕ ಸಲ ಕೇಳಿದರು ನೀವು ಇಲ್ಲದ ನೆಪ ಹೇಳಿ ಹಣ ಕೊಡುವದನ್ನೂ ತಿಪ್ಪಿ ಸಿಕೊಳ್ಳಲು ಪ್ರಾರಂಭಿಸಿದಿರಿ," ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ4**: ಫ್ರಾಸಾ-**1** ವಿಜಯಕುಮಾರ ಶಿವಲಿಂಗಪ್ಪ ಚನ್ನನ್ನವರ**,** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರಿದು " ದಿನಾಂಕಃ 04.05.2016 ರಂದು ಆರೋಪಿಯಾದ ನಿಮ್ಮನ್ನು ಭೇಟಿಯಾದಾಗ ಅವನಿಂದ 6,00,000/– ರೂ. ಗಳ ದಿ ಬೆಲಗಮ್ ಡಿಸ್ಟ್ರಿಕ್ಟ ಸೆಂಟ್ರಲ ಕೊ–ಆಪ್ ಬ್ಯಾಂಕ ಲಿ. ಬೆಳಗಾವಿ

ಬ್ಯಾಂಕ ಶಾಖೆ ಬೈಲಹೊಂಗಲ ಇದರ ಒಂದು ಚಕ್ಕನ್ನು ಅದೇ ದಿನ ಸಹಿ ಮಾಡಿ ಕೊಟ್ಟಿರುತ್ತೀರಿ. ದಿನಾಂಕಃ 05.05.2016 ರಂದು ಪಿರ್ಯಾದಿಯವರು ಸದರಿ ಚೆಕನ್ನು ತಮ್ಮ ಖಾತೆಗೆ ಸದರ ಎಕ್ಸಿಸ್ ಬ್ಯಾಂಕ ಶಾಖೆ ಬೈಲಹೊಂಗಲ ಬ್ಯಾಂಕ ನಗದಿಕರಣದ ಸಲುವಾಗಿ ಜಮೆ ಮಾಡಿದ್ದು ಇರುತ್ತದೆ. ನಂತರ 11.05.2016 ರಂದು ಸದರ ಬ್ಯಾಂಕಿನವರು ಚಕ್ಕನ್ನು ಕೊಟ್ಟ ವ್ಯಕ್ತಿಯ ಖಾತೆಯಲ್ಲಿ ನಮೂದಿಸಿದಷ್ಟು ಹಣ ಜಮಾ ಇರುವುದಿಲ್ಲ ( ಇನಸಪಿಶಿಯಂಟ್ ಬ್ಯಾಲನ್ಸ) ಅಂತಾ ಪತ್ರವನ್ನು ನೀಡಿರುತ್ತರೆ, ಎಂದು ಸಾಕ್ಷಿ ನುಡಿಯತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ5**: ಫ್ರಾಸಾ**-1** ವಿಜಯಕುಮಾರ ಶಿವಲಿಂಗಪ್ಪ ಚನ್ನನ್ನವರ**,** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರಿದು ನಂತರ ಬೈಲಹೊಂಗಲ ಎಕ್ಸಿಸ್ ಬ್ಯಾಂಕನವರಿಂದ ಲಿಖಿತದಲ್ಲಿ ಉತ್ತರವನ್ನು ಪಡೆದುಕೊಂಡು ನಂತರ ವಕೀಲರ ಮುಖಾಂತರ ದಿನಾಂಕಃ 14.05.2016 ರಂದು ಕಾನೂನು ಬದ್ಧ ನೋಟಿಸನ್ನು ಆರೋಪಿತರಾದ ನಿಮಗೆ ನೋಂದಾಯಿತ ಅಂಚೆಯ ಮೂಲಕ ಕಳಹಿಸಿದ್ದು, ಸದರಿ ನೋಟಿಸನ್ನು ಆರೋಪಿಯಾದ ನೀವು ದಿನಾಂಕಃ 16.05.2016 ರಂದು ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

ಪ್ರಶ್ನೆ **6.** ಈ ಪ್ರಕರಣದಲ್ಲಿ ನೀವು ಸ್ವ ಇಚ್ಛೆಯಿಂದ ಏನಾದರೂ ಹೇಳುವುದಿದೇಯಾ**?**

ಉತ್ತರಃ ಆ

ಪ್ರಶ್ನೆ **7.** ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ**?**

ಉತ್ತರಃ ಆ

(ಈ ಮೇಲ್ಕಂಡ ಅಪರಾಧವನ್ನು ಸೂಚಿಸುವ ಸಂಗತಿಗಳನ್ನು ಆರೋಪಿತರಿಗೆ ಅರ್ಥವಾಗುವ ಬಾಷೆಯಲ್ಲಿ ಬಹಿರಂಗ ನ್ಯಾಯಾಲಯದಲ್ಲಿ ಓದಿ, ವಿವರಿಸಿ ಅವರು ನೀಡಿದ ಉತ್ತರವನ್ನು ಯಥಾವತ್ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೆನೆ.)

Sd/-

ದಿಃ 12/05/2026

ಪ್ರ.ದ.ನ್ಯಾ.ದಂಡಾಧಿಕಾರಿಗಳು.
ಬೈಲಹೊಂಗಲ.